THE HINDU
WEDNESDAY, AUGUST 30, 2017
INDIA'S NATIONAL NEWSPAPER SINCE 1878

# ALL INDIA COUNCIL FOR TECHNICAL EDUCATION

(A STATUTORY BODY OF THE GOVERNMENT OF INDIA)
Nelson Mandela Marg, Vasant Kunj, New Delhi - 110070
Ph.: 011-29581000, 26131566 Website : www.aicte-india.org

## SWAYAM PROJECT CELL

### Invitation for Expression of Interest (EOI) and Proposals for Developing MOOCs/Creation of New Courses

Government of India (GOI) in its pursuit of National Digital Initiatives launched indigenous technology enabled learning platform– SWAYAM for hosting Massive Open Online Courses (MOOCs). All India Council for Technical Education (AICTE) has been designated as National Coordinator (NC) for developing online Courses for SWAYAM. AICTE invites **Expression of Interest (EOI) and Proposals from all Private Universities and other Educational Content Developers** all over the Country for creation of new courses in Engineering and Technical disciplines for SWAYAM MOOCs Platform. Proposals are also invited for inter-disciplinary Courses for self-paced learning in various areas, like, Yoga, GST, Economic Survey, Skill Development, Panchayati Raj, etc. from different Government Departments/Ministries/Autonomous Bodies/ Institutions in India and Foriegn Countries . AICTE reserves the right to accept or reject the proposal for creation of new online courses for SWAYAM. Guidelines for Development and Implementation of MOOCs are available at **https://swayam.gov.in/About**

The last date of receipt of proposals is 30th September, 2017. For details, please visit website at **www.aicte-india.org/btenders.Php**

**Advt. No. SWAYAM/ 08(08)/2017** **MEMBER SECRETARY**

ಧವಾರ, ಆಗಸ್ಟ್ 30, 2017 | ಮಂಗಳೂರು | ₹ 5.00 | ಸಂಪುಟ 19 | ಸಂಚಿಕೆ 240 | ಪುಟ 16 + 4
www.prajavani.net
/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಎಂದೋ ಘಟಿಸಿದ ತಪ್ಪಿಗೆ ಸ್ವಮರುಕ ಪಡುತ್ತಾ ಜೀವನ ಸಾಗಿಸುವುದನ್ನು ನಿಲ್ಲಿಸಿ, ಬದುಕನ್ನು ಸುಂದರವಾಗಿಸಿ.

16 ಲಕ್ಷ ಕುಟುಂಬಗಳಿಗೆ ಬಿಪಿಎಲ್ ಪಡಿತರ ಚೀಟಿ ವಿತರಣೆ 7

ಗಣೇಶೋತ್ಸವದಲ್ಲಿ ಅರೆಬೆತ್ತಲೆ ನೃತ್ಯ 4

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 31,388 ▼ | 9,796 ▼ | ₹29,951 (ಬೆಂಗಳೂರು) ▲ | ₹40,300 (ಬೆಂಗಳೂರು) ▲ | 63.91 ▼ |

## ಸಹ್ಯಾದ್ರಿ ಉದ್ಯಮಾಡಳಿತ ಕಾಲೇಜಿನ ಪ್ರಾಂಶುಪಾಲ ಡಾ. ಉಮೇಶ್

# ವಿದ್ಯಾರ್ಥಿಗಳಿಗೆ ಸೃಜನಶೀಲತೆ, ಕೌಶಲ ಅಗತ್ಯ

ಪ್ರಜಾವಾಣಿ ವಾರ್ತೆ

**ಕಾರ್ಕಳ:** 'ವಿದ್ಯಾರ್ಥಿಗಳು ಸೃಜನಶೀಲತೆ ಹಾಗೂ ವಿವಿಧ ಕೌಶಲ್ಯಗಳನ್ನು ಬೆಳೆಸಿಕೊಂಡಾಗ ಇಂದು ಸಫಲತೆಯನ್ನು ಕಾಣಬಹುದಾಗಿದೆ' ಎಂದು ಮಂಗಳೂರು ಸಹ್ಯಾದ್ರಿ ಉದ್ಯಮಾಡಳಿತ ಕಾಲೇಜಿನ ಪ್ರಾಂಶುಪಾಲ ಡಾ. ಉಮೇಶ್ ಎಂ. ಬೂಷಿ ತಿಳಿಸಿದರು.

ತಾಲ್ಲೂಕಿನ ನಿಟ್ಟೆ ಎನ್. ಎಂ.ಎ.ಎಂ ತಾಂತ್ರಿಕ ಕಾಲೇಜಿನಲ್ಲಿ ಈಚೆಗೆ ವಿದ್ಯಾರ್ಥಿ ಚಟುವಟಿಕೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ವಿದ್ಯಾರ್ಥಿ ದೊಡ್ಡಗುರಿಯನ್ನು ಹೊಂದಿರಬೇಕು. ತಾವು ಆರಿಸಿಕೊಂಡ ಕ್ಷೇತ್ರದಲ್ಲಿ ಆಸಕ್ತಿ ಹಾಗೂ ತಾವು ಮಾಡುವ ಕೆಲಸದಲ್ಲಿ ಶ್ರದ್ಧೆಯನ್ನು ಹೊಂದಿದ್ದರೆ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು' ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ,ಪ್ರಾಂಶುಪಾಲ ಡಾ.ನಿರಂಜನ್ ಎನ್ ಚಿಪ್ಳೂಣ್ಕರ್, 'ನಿರಂತರ ಕಲಿಕೆ ಅತ್ಯಗತ್ಯ. ಆಗ ಮಾತ್ರ ಸಾಧನೆಯ ಶಿಖರವನ್ನು ತಲುಪಲು ಸಾಧ್ಯ' ಎಂದರು.




ಕಾರ್ಕಳ ತಾಲ್ಲೂಕಿನ ನಿಟ್ಟೆ ಎನ್.ಎಂ.ಎ.ಎಂ ತಾಂತ್ರಿಕ ಕಾಲೇಜಿನಲ್ಲಿ ಈಚೆಗೆ ವಿದ್ಯಾರ್ಥಿ ಚಟುವಟಿಕೆಗಳನ್ನು ಮಂಗಳೂರು ಸಹ್ಯಾದ್ರಿ ಉದ್ಯಮ ಆಡಳಿತ ಕಾಲೇಜಿನ ಪ್ರಾಂಶುಪಾಲ ಡಾ. ಉಮೇಶ್ ಎಂ. ಬೂಷಿ ಉದ್ಘಾಟಿಸಿದರು.

ಕಾಲೇಜಿನ ಜೈವಿಕ ಇಂಧನ ವಿಭಾಗದ ಫೋಯ್ನಿಕ್ಸ್ ಸಂಘದ ಅಧ್ಯಕ್ಷರಾಗಿ ಮೋಹನ್‌ರಾಜ್ ಅಡ್ಯಂತಾಯ, ಸಿವಿಲ್ ವಿಭಾಗದ ಓಶನ್ ಸಂಘದ ಅಧ್ಯಕ್ಷರಾಗಿ ಮೋಹಿತ್ ಕಂಬಣ್ಣ, ಕಂಪ್ಯೂಟರ್ ಸೈನ್ಸ್ ವಿಭಾಗದ ಎಸಿಇ ಸಂಘದ ಅಧ್ಯಕ್ಷರಾಗಿ ವಿಷ್ಣು ಬಿ.ಎಸ್, ಇ ಅಂಡ್ ಸಿ ವಿಭಾಗದ ಎಲೆಸ್ಕಾ ಸಂಘದ ಅಧ್ಯಕ್ಷರಾಗಿ ಕಾರ್ತಿಕ್ ಕೆ, ಇ ಅಂಡ್ ಇ ವಿಭಾಗದ ಇಲೈಟ್ಸ್ ಸಂಘದ ಅಧ್ಯಕ್ಷರಾಗಿ ಮುರಳಿ ಪಿ., ಸಂವಹನ ಸಂಪರ್ಕ ವಿಭಾಗದ ಐನೋಡ್ ಅಧ್ಯಕ್ಷರಾಗಿ ರೋವಿನ್ ಕ್ಯಾಸ್ಟಲಿನೊ, ಮೆಕ್ಯಾನಿಕಲ್ ಸಂಘದ ಅಧ್ಯಕ್ಷರಾಗಿ ಸುಹಾನ್ ಜೇಸುದಾಸ್ ಹಾಗೂ ಎಂ.ಸಿ.ಎ ವಿಭಾಗದ ಎಸ್.ಎ.ಎಂ.ಸಿ.ಎ ಸಂಘದ ಅಧ್ಯಕ್ಷರಾಗಿ ಕೆ.ಎಮ್.ಸೋಮಣ್ಣ ಪ್ರತಿಜ್ಞಾ ಪದಗ್ರಹಣ ಮಾಡಿದರು.

ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗದ ಡೀನ್ ಡಾ.ಸುಬ್ರಹ್ಮಣ್ಯ ಭಟ್ , ಉಪಪ್ರಾಂಶುಪಾಲ . ಡಾ.ಶ್ರೀನಿವಾಸ್ ರಾವ್, ವಿದ್ಯಾರ್ಥಿನಿ ಜೇನ್ ಮಥಾಯಿಸ್ ಇದ್ದರು. ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು.

ಬುಧವಾರ 30.8.2017
ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ
51 ವರ್ಷ • ಸಂಚಿಕೆ 240 • ಪುಟ 12+4 • ಬೆಲೆ ₹5
epaper.kannadaprabha.in

32320 ಕೋಟಿ ತೆರಿಗೆ ಪಾವತಿಸಿ: ಹಚ್‌ಗೆ ಸರ್ಕಾರ ನೋಟಿಸ್ ↘9

ನಾಡಿದ್ದಿನಿಂದ ಕೆಪಿಎ
ಟ್ರೋಫಿ ಅನಾವ

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

College of Engineering & Management
CENTRAL LIBRARY



ಇಂದಿನ ಸ್ಪೆಷಲ್! ಪುರವಣಿಯಲ್ಲಿ
15 ವ
ಸರಿತಾ

15 ವರ್ಷ ಬಳಿಕ ಕನ್ನಡ
ಕೃಷ್ಣಸುಂದರಿ. ಯೋಗ
ನಿರ್ದೇಶನದ 'ಅಯೋಗ
ಮೆಚ್ಚಿ ನಟಿಸಲು ಒಪ್ಪಿದ

# ಸೆ.1ಕ್ಕೆ ರಾಜ್ಯದ ಬಿಇ ಕಾಲೇಜುಗಳು ಬಂದ್

**ಬೆಂಗಳೂರು:** ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(ವಿಟಿಯು)ದ ಪರೀಕ್ಷೆ, ಮೌಲ್ಯಮಾಪನ ಪ್ರಕ್ರಿಯೆಯಲ್ಲಿನ ಗೊಂದಲ, ಫಲಿತಾಂಶ ಪ್ರಕಟಣೆಯ ಅನಿಶ್ಚಿತತೆ ವಿರುದ್ಧ ಸಿಡಿದೇಳಲು ನಿರ್ಧರಿಸಿರುವ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸೆ.1ಕ್ಕೆ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳನ್ನು ಬಂದ್ ಮಾಡಿ ಹೋರಾಟಕ್ಕಿಳಿಯಲು ನಿರ್ಧರಿಸಿದ್ದಾರೆ. ನಾನ್ ಸಿಬಿಸಿಎಸ್ (ಹಳೆ ಪಠ್ಯಕ್ರಮ) ಪಠ್ಯಕ್ರಮದ ವಿದ್ಯಾರ್ಥಿಗಳಿಗೆ 'ಇಯರ್ ಬ್ಯಾಂಕ್' (ಹಿಂದಿನ ವರ್ಷದಲ್ಲಿ 4 ವಿಷಯಗಳಲ್ಲಿ ಅನುತ್ತೀರ್ಣಗೊಂಡರೆ ಮುಂದಿನ ವರ್ಷಕ್ಕೆ ಪ್ರವೇಶ ನಿರಾಕರಣೆ) ಪದ್ಧತಿ ಕೈಬಿಡಬೇಕು. ಅದೇ ರೀತಿ, ಸಿಬಿಸಿಎಸ್ ವಿದ್ಯಾರ್ಥಿಗಳಿಗೆ ಬಾಕಿ ಇರುವ ವಿಷಯಗಳನ್ನು ಉತ್ತೀರ್ಣ ಮಾಡಿಕೊಳ್ಳಲು ಮತ್ತೊಂದು ಪೂರಕ ಪರೀಕ್ಷೆಗೆ ಅವಕಾಶ ನೀಡಬೇಕು ಎಂದು ವಿಟಿಯು ವಿದ್ಯಾರ್ಥಿಗಳ ಹೋರಾಟ ಸಮಿತಿ ಅಗ್ರಹಿಸಿದೆ.